ಅಂಗಡಿ, ಆಫೀಸು, ಬ್ಯಾಂಕು, ಸಾಮಾಜಿಕ ಆರ್ಥಿಕ ಸಂಸ್ಥೆಗಳು ಒಂದೊಂದಾಗಿ ಮುಚ್ಚತೊಡಗಿದವು.

ಮೇಧಾವಿಗಳು ತಮಗೆ ತಾವೇ ಹೇಳಿಕೊಳ್ಳತೊಡಗಿದರು ಕ್ಷುದ್ರಗ್ರಹ ಅಪ್ಪಳಿಸಿದ್ದರೆ, ಅನ್ಯಗ್ರಹದ ಜೀವಿಗಳೇನಾದರೂ ದಾಳಿ ಮಾಡಿದ್ದರೆ ಅಥವಾ ಮೂರನೇ ಮಹಾಯುದ್ಧವೇ ಜರುಗಿದ್ದರೂ ಹೇಗಾದರೂ ಮಾಡಿ ನಿಭಾಯಿಸ ಬಹುದಾಗಿತ್ತು. ಆದರೆ ಇದೇನಿದು, ಇದೆಂಥ ಮಾನಸಿಕ ಕಾಯಿಲೆ...! ಪದೇ ಪದೇ ನಿದ್ದೆ, ಪದೇ ಪದೇ ಅದೇ ಕನಸು, ಅದೇ ನೆರಳಿನಾಕೃತಿ, ಅದೇ ಮಾತು– ಈ ವಿಶ್ವವೊಂದು ಭ್ರಮೆ!....ಛೆ, ಭಯಾನಕತೆ ಭಯಂಕರಗೊಂಡು ಸುಪ್ತಪ್ರಜ್ಞೆ ಯಲ್ಲಿಳಿದು ಬೇರುಗಳನ್ನು ಭದ್ರಗೊಳಿಸಿಕೊಳ್ಳುತ್ತಲಿದೆ..! ಪಾರಾಗುವ ಬಗೆ ಯಾದರೂ ಹೇಗೆ? ಪಾರು ಮಾಡುವವರಾದರೂ ಯಾರು, ಎಲ್ಲಿದ್ದಾರೆ? ಹೇ ದೇವಾ.!

ಅಂತೂ ಒಂದಷ್ಟು ದಿನಗಳ ಮೇಲೆ ಬಂತು ಆ ಒಂದು ದಿನ!

***

**4 ಅಕ್ಟೋಬರ್, ಸ್ಟಾಕ್ ಹೋಮ್, ಸ್ವೀಡನ್**

ಮನುಕುಲದ ಇತಿಹಾಸದಲ್ಲೇ ಅಭೂತಪೂರ್ವ.

ಸ್ವೀಡಿಶ್ ಅಕಾಡೆಮಿ ಆಫ್ ಸಾಯನ್ಸಿಸ್ ಮತ್ತು ನಾರ್ವೆಜಿಯನ್ ನೊಬೆಲ್ ಕಮಿಟಿ ಜೀವಶಾಸ್ತ್ರ, ಔಷಧಿಶಾಸ್ತ್ರ ಹಾಗೂ ಜಾಗತಿಕ ಶಾಂತಿಗಾಗಿ ಪ್ರತ್ಯೇಕವಾಗಿ ಕೊಡುತ್ತಿದ್ದ ಪ್ರಶಸ್ತಿಯನ್ನು ಈ ಸಲ ಒಟ್ಟಾಗಿ ಘೋಸ್ಟ್ ಆಕ್ರಮಣದಿಂದ ಬಚಾವ್ ಮಾಡಿದ ಡಾ. ವಿನೋದ ಮಿಶ್ರಾ ಅವರಿಗೆ ಕೊಡಬೇಕೆಂದು ನಿರ್ಧರಿಸಿದವು.

ನೂರಾರು ಮಾಧ್ಯಮ ವರದಿಗಾರರು ಡಾ. ವಿನೋದ ಮಿಶ್ರಾ ಅವರ ಸಂದರ್ಶನಕ್ಕಾಗಿ ಬಂದಿದ್ದಾರೆ. ಆ ಘೋಸ್ಟನ್ನು ಅವರು ಹೇಗೆ ಓಡಿಸಿದರೆಂದು ಮತ್ತೊಂದು ಸಲ ವಿವರ ವಿವರವಾಗಿ ತಿಳಿದುಕೊಳ್ಳಲು ತುದಿಗಾಲ ಮೇಲೆ ನಿಂತಿದ್ದಾರೆ.

ಗಂಟಲು ಸರಿ ಮಾಡಿಕೊಂಡು ಡಾ. ಮಿಶ್ರಾ ಹೇಳತೊಡಗಿದರು:

ದೇಹಾತೀತ ಅನುಭವಗಳ ಬಗ್ಗೆ ಹಾಗೂ ಸಾವು ಸಮೀಪದ ಅನುಭವಗಳ ಬಗ್ಗೆ ಬಹಳ ವರ್ಷಗಳಿಂದ ಸಂಶೋಧನೆಗಳನ್ನು ಮಾಡುತ್ತ ಬಂದಿದ್ದೆ. ಮನುಷ್ಯ ಪ್ರಜ್ಞೆ ದೇಹದಾಚೆಗೂ ಸ್ವತಂತ್ರ ಅಸ್ತಿತ್ವದಲ್ಲಿರುತ್ತದೆಂದು ನನ್ನ ನಂಬಿಕೆ. ಇದನ್ನು ಪ್ರಯೋಗಗಳಿಂದ ಸಾಬೀತುಗೊಳಿಸಬೇಕಿತ್ತು. ಈ ಕಾರಣಕ್ಕಾಗಿ ಉಪಕರಣ ವೊಂದನ್ನು ಸಿದ್ಧಪಡಿಸಿಕೊಂಡೆ. ಕೆಲವೊಂದು ಔಷಧಿಗಳನ್ನು ತಯಾರಿಸಿಟ್ಟು ಕೊಂಡೆ. ದೇಹದಿಂದ ಪ್ರಜ್ಞೆಯನ್ನು ಬೇರ್ಪಡಿಸಲು ಸಾಧ್ಯವೆಂಬುದನ್ನು ಕಂಡು ಹಿಡಿದೆ. ಆದರೆ ಒಮ್ಮೆ ಬೇರ್ಪಟ್ಟ ಪ್ರಜ್ಞೆಯನ್ನು ಮರಳಿ ಅದೇ ದೇಹದೊಳಗೆ ಸೇರಿಸುವುದು ಹೇಗೆಂಬುದರ ಬಗ್ಗೆ ಖಚಿತತೆ ಇರಲಿಲ್ಲ.

ಈಗಲೂ ಇಲ್ಲ. ಈ ಪ್ರಜ್ಞೆ ಅನ್ನೋದು ಮೂಲತಃ ಹೊರಗಿನಿಂದ ತಂದು ಪಳಗಿಸಿ ಅಡಕಗೊಳಿಸಿದ ಬಲವೋ ಅಥವಾ ಶಕ್ತಿಯೋ ಇದ್ದಿರಲೂಬಹುದು. ನಾನು ಕೇವಲ ತುದಿ ತುದಿಯಲ್ಲಿ ಯೋಚಿಸಿ ಒಂದಿಷ್ಟನ್ನು ಮಾತ್ರ ಪ್ರಯೋಗಗಳ ಮೂಲಕ ಸಾಧ್ಯವಾಗಿಸಿಕೊಂಡಿದ್ದೇನೆ. ಪ್ರಜ್ಞೆಯ ಆಳ ಅಗಾಧ, ಅಪಾರ. ಆಳಕ್ಕೆ ಇಳಿದಿಳಿದು ಹಲವಾರು ಸತ್ಯಾಂಶಗಳನ್ನು ಕಂಡುಹಿಡಿಯಲು ಬೇಕಾದಷ್ಟು ಅವಕಾಶಗಳಿವೆ. ಇರಲಿ.

ಪ್ರಜ್ಞೆಯನ್ನು ದೇಹದಿಂದ ಪ್ರತ್ಯೇಕಿಸಿದರೆ ದೇಹವನ್ನು ಕೊಂದಂತಾಗುತ್ತದೆಂಬ ಭೀತಿ ನನ್ನಲ್ಲಿತ್ತು. ಆದುದರಿಂದ ಮನುಷ್ಯರ ಮೇಲೆ ಪ್ರಯೋಗ ಮಾಡಲಿಲ್ಲ. ಪ್ರಾಣಿಗಳ ಮೇಲೆ ಮಾಡಬೇಕೆಂದು ಯೋಚಿಸುತ್ತಿದ್ದೆ, ಅಷ್ಟರಲ್ಲಿಯೇ ಈ ಘೋಸ್ಟ್ ಬಂದಿತು. ದಿನದಿಂದ ದಿನಕ್ಕೆ ಹೆಚ್ಚೆಚ್ಚೇ ಆಗುತ್ತ ಹೊರಟ ಇದರ ಅತಿಕ್ರಮಣದಿಂದಾಗಿ ಮನುಷ್ಯಕುಲಕ್ಕೆ ಭವಿತವ್ಯವೇ ಇಲ್ಲವೆನಿಸತೊಡಗಿತು. ನಾನೇ ಪ್ರಯೋಗಕ್ಕೆ ಒಳಗಾಗಿ ಈ ದೇಹದಿಂದ ಹೊರಗೆ ಹೋಗಿ ಘೋಸ್ಟಿಗೆ ಮುಖಾಮುಖಿಯಾಗಿ ಅದಕ್ಕೊಂದು ಗತಿ ಕಾಣಿಸಬೇಕೆಂದು ನಿರ್ಧರಿಸಿದೆ. ಸಹಾಯಕ್ಕಾಗಿ ನನ್ನ ಮಗ ಜೈನನ್ನು ಕೇಳಿದೆ. ತಾನೇ ಆ ಕೆಲಸ ಮಾಡುವುದಾಗಿ ನನ್ನನ್ನು ಒತ್ತಾಯಿಸಿದ. ಯಾವ ಪರಿಯೆಂದರೆ ನಾನು ಒಪ್ಪಿಕೊಳ್ಳಲೇ ಬೇಕಾಯ್ತು... ಅವನನ್ನು ಕಳೆದುಕೊಳ್ಳುತ್ತೇನೆಂಬ ಭೀತಿಯಿದ್ದರೂ!

ನಾನು ತಯಾರಿಸಿದ ಉಪಕರಣದಲ್ಲಿ ಆತ ಮಲಗಿದ. ಗೋ ಅಹೆಡ್ ಡ್ಯಾಡ್ ಅಂತ ನನ್ನನ್ನೇ ಹುರಿದುಂಬಿಸಿದ. ಮನುಕುಲದ ಉಳಿವಿಗಾಗಿ ನಾನು ಇಷ್ಟೂ ತ್ಯಾಗ ಮಾಡದಿದ್ದರೆ ಹೇಗೆ ಎನ್ನುವಂತಿತ್ತು ಅವನ ಧೋರಣೆ. ನಾನು ಕಾರ್ಯೋನ್ಮುಖನಾದೆ. ಅವನ ಉಸಿರಾಟ, ಹೃದಯ ಬಡಿತ, ನಾಡಿಮಿಡಿತ ಒಂದೊಂದಾಗಿ ನಿಲ್ಲತೊಡಗಿದವು. ನಾನು ಭಯಭೀತನಾದೆ. ಕೆಲವೇ ಕ್ಷಣಗಳ ನಂತರ ನನಗೆ ಖಾತ್ರಿಯಾಗಿ ಹೋಯ್ತು ಮಗನನ್ನು ಕೊಂದೆ ಅಂತ. ಅವನ ದೇಹ ತಣ್ಣಗಾಗತೊಡಗಿತು. ನನ್ನಲ್ಲಿ ನಿಲ್ಲಲು ಶಕ್ತಿ ಉಳಿಯಲಿಲ್ಲ. ಕುಸಿದುಕುಳಿತೆ. ಆಗಲೇ ಆಯ್ತು ನೋಡಿ ನನ್ನ ಮಿದುಳಿನಲ್ಲಿ ಮಿಂಚು ಸಂಚರಿಸಿದಂತೆ. ನನ್ನ ಮಗನ ಮಾತು ನನ್ನ ಮಿದುಳಲ್ಲಿ! ಡ್ಯಾಡಿ, ಡ್ಯಾಡಿ ಅಂದ. ಹೌದು ಅವನದೇ ಧ್ವನಿ. ಅವನ ಪ್ರಜ್ಞೆ ನನ್ನೊಂದಿಗೆ ಸಂವಹನ ಸಾಧಿಸಿತ್ತು.

ನಾನು ಕೇಳಿದೆ 'ಎಲ್ಲಿದ್ದೀಯಾ, ಹೇಗೆ ಅನ್ನಿಸುತ್ತಿದೆ?' ಉತ್ತರಿಸಿದ ನನಗೇನೂ ಅನ್ನಿಸುತ್ತಿಲ್ಲ. ನನಗೆ ದೇಹ ಇಲ್ಲ, ಭಾವನೆಗಳೂ ಇಲ್ಲ. ನನಗೆ ನಾನೂ ಕಾಣಿಸುತ್ತಿಲ್ಲ, ಏನೂ ಕಾಣಿಸುತ್ತಿಲ್ಲ. ಕಾಲ ಸರಿಯುತ್ತಿರುವ ಅನುಭವವೇ ಆಗ್ತಿಲ್ಲ. ಭೂತ ವರ್ತಮಾನ ಭವಿಷ್ಯತ್ತು ಎಲ್ಲಾ ಒಂದೇ ಅನ್ನಿಸುತ್ತಿದೆ. ಹ್ಞಾ, ಈಗ ಭೂಮಿಯ ಮೇಲಿರುವುದೆಲ್ಲಾ ಕಾಣಿಸತೊಡಗಿತು. ಎಲ್ಲಾ ಸಮಯದಲ್ಲೂ ನೋಡ್ತಿದ್ದೀನಿ. ಸ್ಪೇಸ್ ಮತ್ತು ಟೈಮನ್ನು ಅಖಂಡಾಗಿಯೇ ನೋಡ್ತಿದ್ದೀನಿ. ನನ್ನ ಜ್ಞಾಪಕ ಶಕ್ತಿ ಉಳಿದುಕೊಂಡಿದೆ. ಅದಕ್ಕೇ ನಿನ್ನೊಂದಿಗೆ ಮಾತಾಡ್ತಿದ್ದೀನಿ.

ಈಗ ಕೇಳಿದೆ ಜನರ ಮನಸ್ಸನ್ನು ನೀನು ನೋಡುವವನಾಗಿದ್ದರೆ, ಓದುವವನಾಗಿದ್ದರೆ ಘೋಸ್ಟಿಗೆ ಕಾರಣ ಏನು ಗೊತ್ತಾಗಿರಬೇಕಲ್ಲ? ಅವನು ಉತ್ತರಿಸಿದ ನೀವೆಲ್ಲ ಯಾವ ಆಯಾಮದಲ್ಲಿದ್ದೀರೋ ಯಾವ ವಿಶ್ವದಲ್ಲಿ ದ್ದೀರೋ ಅದರಲ್ಲಿ ನಾನಿಲ್ಲ ಅನ್ನಿಸುತ್ತಿದೆ. ರಬ್ಬರ್ ಶೀಟ್ ಹಿಗ್ಗುತ್ತಿರುವಂತಹ ಸ್ಥಳದಲ್ಲಿ ನಾನೀಗ ಇದ್ದೇನೆ. ನನಗೆ ಯಾರನ್ನೂ ಯಾವುದನ್ನೂ ಮುಟ್ಟಲಿ ಕ್ಕಾಗುತ್ತಿಲ್ಲ. ಯಾವುದೋ ಒಂದು ಸಮಾಂತರ ಲೋಕದಲ್ಲಿದ್ದೇನೆ ಅಂತ ಅನ್ನಿಸ್ತಿದೆ. ನಾನು ಸತ್ತಿರಬಹುದು ಅಥವಾ ಕನಸು ಕಾಣುತ್ತಿರಬಹುದು. ನಾನೀಗ ಏನೇನು ಗ್ರಹಿಸುತ್ತಿದ್ದೀನಿ ಅನ್ನೋದನ್ನ ಹೇಳಲಿಕ್ಕೆ ಆಗ್ತಾ ಇಲ್ಲ. ಇದು ನಮ್ಮ ಕಲ್ಪನೆಗೂ ಮೀರಿದ್ದು. ನನ್ನ ಸುತ್ತಲೂ ಏನೋ ಒಂದಿದೆ, ನನಗೆ ಕಾಣಿಸ್ತಾ ಇದೆ. ಲಕ್ಷಗಟ್ಟಲೆ ವಿಲಕ್ಷಣ ಬಾಹುಗಳಿರುವ ಬೆಳಕಿನಾಕೃತಿಯಿದು. ಎಲ್ಲಾ ಮನುಷ್ಯ ರಿಗೂ ಇಲ್ಲಿಂದ ಸಂಬಂಧಗಳಿವೆ. ಇದು ಹೇಳ್ತಾಯಿದೆ ಏಕಕಾಲಕ್ಕೆ ಇದು ಏಕವೂ ಆಗುತ್ತದಂತೆ, ಅನೇಕವೂ ಆಗುತ್ತದಂತೆ. ಇದೊಂದು ರೀತಿಯ ಪ್ರಜ್ಞೆಯಂತೆ. ಇತ್ತೀಚೆಗೆ ಆಕಸ್ಮಿಕವಾಗಿ ಸ್ಲಿಪ್ ಆಗಿ ನಮ್ಮ ವಿಶ್ವಕ್ಕೆ ಅಂಟಿಕೊಂಡಿತ್ತಂತೆ. ನಾನಿಲ್ಲಿಗೆ ಬಂದ ಮೇಲೆಯೇ ಅದಕ್ಕೆ ಗೊತ್ತಾಗಿದೆ, ಅಸ್ತವ್ಯಸ್ತಗೊಂಡಿದ್ದ ಬಾಹುಗಳನ್ನು ಸರಿ ಮಾಡಿಕೊಂಡಿತಂತೆ. ಈಗ ಅಲ್ಲೆಲ್ಲಾ ಪರಿಸ್ಥಿತಿ ಸರಿಯಾಗಿರಲಿಕ್ಕೇಬೇಕು..

ಸರಿಯಾಗಿದೆ ಅಂದೆ. ಅವನು ಹೇಳುತ್ತಿದ್ದುದು ನನಗೆ ಅರ್ಥವಾಗುತ್ತಿತ್ತು. ಅಲ್ಲಿಯ ಬೆಳಕಿನಾಕೃತಿಯೇ ನಮ್ಮಲ್ಲಿ ನೆರಳಿನಾಕೃತಿಯಾಗಿ ಕನಸಿನಲ್ಲಿ ಕಾಣಿಸುತ್ತಿದ್ದುದು. ಪ್ರಜ್ಞೆ ಸ್ಲಿಪ್ ಆಗುವ ಬಗ್ಗೆ ನನಗೆ ಗೊತ್ತಿತ್ತು. ಆದರೆ ಅದು ಸ್ಲಿಪ್ ಆದಾಗ ಈ ರೀತಿ ಕಾಣಿಸಿಕೊಂಡು ಕಿರುಕುಳ ಕೊಡುತ್ತದೆಂದು ನಾನು ಕಲ್ಪನೆ ಕೂಡ ಮಾಡಿರಲಿಲ್ಲ. ಆತ ಮಾತು ಮುಂದುವರಿಸಿದ ಈ ಬೆಳಕಿನಲ್ಲಿ ನನಗೆ ಲೀನವಾಗಬೇಕು ಅಂತ ಅನ್ನಿಸ್ತಿದೆ. ಅದಕ್ಕೆಲ್ಲ ತಯಾರಿ ಮಾಡಿಕೊಳ್ಳಬೇಕು ಅಂದ. ನನ್ನ ಎದೆ ಡವಡವಿಸಿತು. ನೋ, ನೋ ಮೈ ಸನ್, ದಯಮಾಡಿ ಹಾಗೆ ಮಾಡಬೇಡ. ತಿರುಗಿ ಬಾ. ನಿನ್ನ ದೇಹದೊಳಗೆ ಸೇರಿಕೋ ಎಂದೆ. ತಿರುಗಿ ಬರ್ತೀನಿ ಅಂತ ಅನ್ನಿಸ್ತಿಲ್ಲ. ನಿನ್ನನ್ನ ಡ್ಯಾಡ್ ಅಂತ ಕರೆಯುತ್ತಿದ್ದ ಆ ದೇಹದಿಂದ ನಾನೀಗ ಹೊರಗೆ ಇದ್ದೀನಿ. ನಾನೀ ಬೆಳಕಿನಲ್ಲೇ ಸೇರಿಬಿಡ್ತೀನಿ. ಗುಡ್ ಬೈ ಅಂದ.

ಡಾ. ಮಿಶ್ರಾ ಅವರ ಕಣ್ಣುಗಳು ತೇವಗೊಂಡಿದ್ದವು.

ನನ್ನ ಮಗ ಹೋದ, ಘೋಸ್ಟನ್ನು ಮುಗಿಸಿಬಿಟ್ಟು. ಜಗತ್ತು ಸಾಮಾನ್ಯ ಸ್ಥಿತಿಗೆ ತಲುಪಿತು. ನಾವೆಲ್ಲ ಬದುಕಿ ಉಳಿದೆವು. ಮನುಷ್ಯ ಕುಲವನ್ನು ಅಪಾಯದಿಂದ ಪಾರುಮಾಡಿದ ಎಂಬ ಮಾತುಗಳೊಂದಿಗೆ ಸಂದರ್ಶನವನ್ನು ಮುಕ್ತಾಯ ಗೊಳಿಸಿದರು.

ಭಾರವಾದ ಹೃದಯ ಹೊತ್ತು, ಒಂದೊಂದೇ ಹೆಜ್ಜೆ ಹಾಕುತ್ತ ರೂಮು ಸೇರಬೇಕೆನ್ನುವಾಗಲೇ ತಲೆಯಲ್ಲಿ ಮಿಂಚು ಸಂಚರಿಸಿದಂತಾಯ್ತು. ಇದೇನಿದು ಎಂದುಕೊಂಡು ಕಣ್ಮುಚ್ಚಿ ಕಣ್ತೆರೆದರು. ಮಿದುಳಿನಲ್ಲೊಂದು ಧ್ವನಿ ಕೇಳಿಸಿದಂತೆನಿಸಿತು ನನ್ನ ದೇಹವನ್ನೇಕೆ ದಹನ ಮಾಡಿದೆ? ಶಾಕ್ ಹೊಡೆದಂತಾಯಿತು! ನಡುಗಿ ನಡುಗಿ, ಕೊನೆಗೆ ಕಲ್ಲಿನಂತಾಗಿ ನಿಂತುಬಿಟ್ಟರು ಡಾ. ಮಿಶ್ರಾ. ಅವರ ಕಾಲುಗಳು ಜೋಮು ಹಿಡಿದ ಹಾಗೆ ಅನ್ನಿಸಿತು. ಮೈಯಲ್ಲಿ ಶಕ್ತಿಯೇ ಇಲ್ಲದಂತಾಗಿ ಕುಸಿದು ಬಿದ್ದರು. ಕೊನೆಗೂ ಏಳಲಿಕ್ಕಾಗಲೇ ಇಲ್ಲ.

■

